# ಮೈಸೂರು ವಿಶ್ವವಿದ್ಯಾನಿಲಯ

## ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ

ಮಾನಸಗಂಗೋತ್ರಿ, ಮೈಸೂರು – 570006

(4.0 ಸ್ಕೇಲ್‌ನ 3.47 ಸಿಜಿಪಿಎಯೊಂದಿಗೆ ನ್ಯಾಕ್‌ನಿಂದ ಮರು ಮಾನ್ಯತೆ ಪಡೆದಿದೆ)

ಎನ್‌ಐಆರ್‌ಎಫ್–2020 ವಿಶ್ವವಿದ್ಯಾನಿಲಯ ವಿಭಾಗದಲ್ಲಿ 27ನೇ ಸ್ಥಾನ ಮತ್ತು ಒಟ್ಟಾರೆ ವಿಭಾಗದಲ್ಲಿ 47ನೇ ಸ್ಥಾನ)

ದೂರವಾಣಿ: 0821-2419318/386/429 e-mail : dswuommgm@gmail.com


ಸಂಖ್ಯೆ: ವಿಕ್ಷೇಪಾ.10/25/1134/2020-2021 ದಿನಾಂಕ: 16-02-2021

ಅಡಕ :

1. ನಮೂನೆ – 1
2. ಪ್ರಮಾಣ ಪತ್ರ
3. ಹಣ ಸಂದಾಯ ರಶೀದಿ

## ಸುತ್ತೋಲೆ

2020-2021ನೇ ಶೈಕ್ಷಣಿಕ ಸಾಲಿನಲ್ಲಿ ವ್ಯಾಸಂಗ ಮಾಡುತ್ತಿರುವ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡಲಾಗುವ ಧನಸಹಾಯಕ್ಕೆ ವಿಶ್ವವಿದ್ಯಾನಿಲಯದ ಅಧೀನ ಕಾಲೇಜುಗಳು ಮತ್ತು ಸಂಯೋಜಿತ ಕಾಲೇಜುಗಳು ಹಾಗೂ ಸ್ನಾತಕೋತ್ತರ ಅಧ್ಯಯನ ವಿಭಾಗ/ಕೇಂದ್ರಗಳಲ್ಲಿ ವ್ಯಾಸಂಗ ಮಾಡುತ್ತಿರುವ ಅರ್ಹ ವಿಶೇಷಚೇತನ ವಿದ್ಯಾರ್ಥಿಗಳಿಂದ ನಿಗದಿತ ನಮೂನೆ-1ರಲ್ಲಿ ಧನಸಹಾಯಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಭರ್ತಿ ಮಾಡಿದ ಅರ್ಜಿಗಳನ್ನು ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಮಾನಸಗಂಗೋತ್ರಿ, ಮೈಸೂರು, ಇಲ್ಲಿಗೆ **ದಿನಾಂಕ : 19-03-2021** ರೊಳಗಾಗಿ ಸಲ್ಲಿಸಲು ತಿಳಿಸಲಾಗಿದೆ. **ನಂತರ ಬಂದ ಅರ್ಜಿಗಳನ್ನು ಯಾವುದೇ ಕಾರಣಕ್ಕೂ ಪರಿಗಣಿಸಲಾಗುವುದಿಲ್ಲ** (ಹೆಚ್ಚಿನ ವಿದ್ಯಾರ್ಥಿಗಳಿದ್ದಲ್ಲಿ ಅರ್ಜಿಯನ್ನು ಜೆರಾಕ್ಸ್ ಮಾಡಿಸಿಕೊಳ್ಳುವುದು).

**ನಿಬಂಧನೆಗಳು:**

1. ಅಂಗವಿಕಲತೆಯ ಬಗ್ಗೆ **ಜಿಲ್ಲಾ ವೈದ್ಯಾಧಿಕಾರಿಗಳಿಂದ ಪಡೆದ ಇತ್ತೀಚಿನ ಪ್ರಮಾಣ ಪತ್ರವನ್ನು** ಲಗತ್ತಿಸಬೇಕು.
2. ಅಂಗವಿಕಲತೆಯು ಎದ್ದು ಕಾಣುವಂತಹ **ಇತ್ತೀಚಿನ ಭಾವಚಿತ್ರವನ್ನು (ಮೂಲ ಭಾವಚಿತ್ರ)** ಲಗತ್ತಿಸಬೇಕು.
3. ಅರ್ಜಿಯ ಜೊತೆಗೆ ಲಗತ್ತಿಸಿರುವ **ಹಣ ಸಂದಾಯ ರಶೀದಿಗೆ ವಿದ್ಯಾರ್ಥಿಯು ಸಹಿ ಮಾಡಿ, ಪ್ರಾಂಶುಪಾಲರು/ಅಧ್ಯಕ್ಷರಿಂದ ದೃಢೀಕರಿಸಿ ಕಳುಹಿಸಬೇಕು. ಮೊತ್ತವನ್ನು ರಶೀದಿಯಲ್ಲಿ ಯಾವುದೇ ಕಾರಣಕ್ಕೂ ನಮೂದಿಸಬಾರದು.** ಒಂದು ವೇಳೆ ಧನಸಹಾಯ ಮಂಜೂರಾಗದಿದ್ದಲ್ಲಿ ಈ ರಶೀದಿಯನ್ನು ಹಿಂದಿರುಗಿಸಲಾಗುವುದು.
4. **ಶೇ.40%** ಕ್ಕಿಂತ ಕಡಿಮೆ ಅಂಗವಿಕಲತೆಯಿರುವವರು ಅರ್ಜಿಯನ್ನು ಸಲ್ಲಿಸಬಾರದು.
5. ವಿದ್ಯಾರ್ಥಿಗಳು ಘನ ಸರ್ವೋಚ್ಚ ನ್ಯಾಯಾಲಯದ ಆದೇಶದಂತೆ **ಕಾಲೇಜು/ವಿಭಾಗಗಳಲ್ಲಿ ಕಡ್ಡಾಯವಾಗಿ ಶೇಕಡ 75% ಕ್ಕೂ ಹೆಚ್ಚಿನ ಹಾಜರಾತಿಯನ್ನು** ಹೊಂದಿರಬೇಕಾಗಿರುತ್ತದೆ.
6. ವಿದ್ಯಾರ್ಥಿಗಳ ಖಾತೆಗೆ ಧನಸಹಾಯದ ಮೊತ್ತವನ್ನು ಸಂದಾಯ ಮಾಡುವುದರಿಂದ ಸದರಿ ವಿದ್ಯಾರ್ಥಿಯು ಖಾತೆಯನ್ನು ಹೊಂದಿರುವ ಬ್ಯಾಂಕಿನ ಹೆಸರು, ಉಳಿತಾಯ ಖಾತೆ ಸಂಖ್ಯೆ ಹಾಗು IFSC Code ಸ್ಪಷ್ಟವಾಗಿ ಕಾಣುವಂತಹ ಬ್ಯಾಂಕ್ ಪಾಸ್‌ಬುಕ್ ಜೆರಾಕ್ಸ್ ಪ್ರತಿ ಲಗತ್ತಿಸಬೇಕು.
7. ಸೂಚಿಸಿದ ದಿನಾಂಕ ಹಾಗೂ ನಿಗದಿತ ವೇಳೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು ಹಾಜರಾಗದಿದ್ದ ಪಕ್ಷದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

8. ಧನಸಹಾಯಕ್ಕೆ ಕೋರಿ ಅರ್ಜಿ ಸಲ್ಲಿಸುವ ತಮ್ಮ ಕಾಲೇಜಿನ ಒಟ್ಟು ವಿದ್ಯಾರ್ಥಿಗಳ ಮಾಹಿತಿಯನ್ನು **(ವಿದ್ಯಾರ್ಥಿಯ ಹೆಸರು, ತರಗತಿ, ವಿಭಾಗ, ಕಾಲೇಜಿನ ಹೆಸರು, ಬ್ಯಾಂಕ್ ಖಾತೆ ಸಂಖ್ಯೆ ಹಾಗೂ IFSC Code) ಅನ್ನು Excel Format ನಲ್ಲಿ ಇಂಗ್ಲೀಷ್‌ನಲ್ಲಿ ಟೈಪ್ ಮಾಡಿ ಸಿ.ಡಿ.ಯಲ್ಲಿ ಅಥವಾ ಇ-ಮೇಲ್‌ಗೆ** ಕಳುಹಿಸುವುದು. (**E-mail- dswuommgm@gmail.com** )

16/2/2021

(ಡಾ.ಎಸ್.ಟಿ. ರಾಮಚಂದ್ರ)
ನಿರ್ದೇಶಕ

16/2/21

ಗೆ,

ವಿಶ್ವವಿದ್ಯಾನಿಲಯದ ಎಲ್ಲಾ ಅಧೀನ ಮತ್ತು ಸಂಯೋಜಿತ ಕಾಲೇಜುಗಳ ಪ್ರಾಂಶುಪಾಲರು ಹಾಗೂ ಎಲ್ಲಾ ಸ್ನಾತಕೋತ್ತರ ಅಧ್ಯಯನ ವಿಭಾಗಗಳ/ಕೇಂದ್ರಗಳ ಮುಖ್ಯಸ್ಥರು, ಮೈಸೂರು, ಮಂಡ್ಯ, ಹಾಸನ ಮತ್ತು ಚಾಮರಾಜನಗರ.

ಪ್ರತಿ :

1. ಮಾನ್ಯ ಕುಲಪತಿಗಳ/ಕುಲಸಚಿವರ/ಹಣಕಾಸು ಅಧಿಕಾರಿಗಳ ಆಪ್ತ ಸಹಾಯಕರು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು
2. ಕಚೇರಿ ಪ್ರತಿ/ ರಕ್ಷಾ ಕಡತಕ್ಕೆ

# ನಮೂನೆ – 1

**2020–2021ನೇ ಸಾಲಿನ ವಿಶೇಷಚೇತನ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾನಿಲಯದ ವತಿಯಿಂದ ನೀಡುವ ಧನಸಹಾಯಕ್ಕಾಗಿ ಅರ್ಜಿ**

| | | |
|---|---|---|
| 1. | ವಿದ್ಯಾರ್ಥಿ/ ವಿದ್ಯಾರ್ಥಿನಿಯ ಹೆಸರು | |
| 2. | ತಂದೆ/ ತಾಯಿ/ ಪೋಷಕರ ಹೆಸರು ಮತ್ತು ವಾರ್ಷಿಕ ವರಮಾನ (ಕಂದಾಯಾಧಿಕಾರಿಗಳಿಂದ ಪಡೆದ ಪ್ರಮಾಣ ಪತ್ರವನ್ನು ಲಗತ್ತಿಸಬೇಕು). | |
| 3. | ವ್ಯಾಸಂಗ ಮಾಡುತ್ತಿರುವ ಕಾಲೇಜು/ ವಿಭಾಗ ಮತ್ತು ತರಗತಿ | |
| 4. | ನಿಮಗೆ ಯಾವ ರೀತಿಯ ಅಂಗವಿಕಲತೆ ಇದೆ?<br>ಅ. ವೈದ್ಯಕೀಯ ಮಂಡಳಿಯಿಂದ ಪಡೆದ ಹಾಗೂ ಜಿಲ್ಲಾ ವಿಕಲಚೇತನ ಕಲ್ಯಾಣಾಧಿಕಾರಿಗಳಿಂದ ದೃಢೀಕರಿಸಲ್ಪಟ್ಟ ಪ್ರಮಾಣ ಪತ್ರ (ಗುರುತಿನ ಚೀಟಿಯ ನಕಲು ಪ್ರತಿಯೊಂದಿಗೆ)<br>ಆ. ಅಂಗವಿಕಲತೆ ಎದ್ದು ಕಾಣುವಂತೆ ತೆಗೆಸಿದ ಭಾವಚಿತ್ರ ಲಗತ್ತಿಸಬೇಕು (ಇತ್ತೀಚಿನ ಭಾವಚಿತ್ರ ಲಗತ್ತಿಸಬೇಕು).<br>ಹಾಗೂ<br>ಇ. ಅಂಗವಿಕಲತೆಯ ಪ್ರಮಾಣವನ್ನು ನಮೂದಿಸಬೇಕು. | |
| 5. | ನೀವು ಹಿಂದಿನ ಸಾಲಿನಲ್ಲಿ ವಿಶ್ವವಿದ್ಯಾನಿಲಯದಿಂದ ಧನ ಸಹಾಯ ಪಡೆದಿದ್ದೀರಾ? ಪಡೆದಿದ್ದರೆ, ಮೊಬಲಗೆಷ್ಟು? | |
| 6. | ಪೋಷಕರ/ ವಿದ್ಯಾರ್ಥಿಗಳ ಸ್ಥಿರ/ ಮೊಬೈಲ್ ದೂರವಾಣಿ ಸಂಖ್ಯೆ: | |
| 7. | ವಿಶೇಷಚೇತನ ವಿದ್ಯಾರ್ಥಿಯು ಖಾತೆಯನ್ನು ಹೊಂದಿರುವ ಬ್ಯಾಂಕಿನ ಹೆಸರು, ಉಳಿತಾಯ ಖಾತೆ ಸಂಖ್ಯೆ ಹಾಗೂ **IFSC Code** | |

ವಿದ್ಯಾರ್ಥಿಯ ಸಹಿ

ವಿಭಾಗದ ಮುಖ್ಯಸ್ಥರು/ ಪ್ರಾಂಶುಪಾಲರು
(ಸಹಿ ಹಾಗೂ ಮೊಹರಿನೊಂದಿಗೆ)

**<u>ವಿಶೇಷ ಸೂಚನೆ:</u>**

1. ಅಂಗವಿಕಲತೆಯ ಪ್ರಮಾಣವು (ಶೇಕಡವಾರು) ಕಾಣುವಂತಹ ಇತ್ತೀಚಿನ ವೈದ್ಯಕೀಯ ಪ್ರಮಾಣ ಪತ್ರವನ್ನು ಲಗತ್ತಿಸಬೇಕು.
2. ಹಣಸಂದ ರಶೀದಿಗೆ, ವಿದ್ಯಾರ್ಥಿಯ ಸಹಿ ಮತ್ತು ಪ್ರಾಂಶುಪಾಲರು/ ಮುಖ್ಯಸ್ಥರಿಂದ ದೃಢೀಕರಿಸಲ್ಪಟ್ಟಿರಬೇಕು.
3. ಅಂಗವಿಕಲತೆಯು ಎದ್ದುಕಾಣುವಂತಹ ಇತ್ತೀಚಿನ ಮೂಲ ಭಾವಚಿತ್ರವನ್ನು ಲಗತ್ತಿಸಬೇಕು.
4. ಶೇಕಡ 40% ಕ್ಕಿಂತ ಕಡಿಮೆ ಅಂಗವಿಕಲತೆಯಿರುವವರು ಅರ್ಜಿಯನ್ನು ಸಲ್ಲಿಸಬಾರದು.
5. ವಿದ್ಯಾರ್ಥಿಗಳು ಕಡ್ಡಾಯವಾಗಿ ಶೇಕಡ 75%ಕ್ಕೂ ಹೆಚ್ಚಿನ ಹಾಜರಾತಿಯನ್ನು ಹೊಂದಿರಬೇಕಾಗಿರುತ್ತದೆ.
6. ಅಪೂರ್ಣ ಅರ್ಜಿಗಳನ್ನು ತಿರಸ್ಕರಿಸಲಾಗುವುದು ಹಾಗೂ ಅಂತಹ ಅರ್ಜಿಗಳನ್ನು ವಾಪಸ್ಸು ಮಾಡಲಾಗುವುದು. ನಂತರ ಯಾವುದೇ ಪತ್ರ ವ್ಯವಹಾರವಿರುವುದಿಲ್ಲ. (ಈ ಬಗ್ಗೆ ಪ್ರಾಂಶುಪಾಲರು/ಮುಖ್ಯಸ್ಥರು ತಮ್ಮ ಗಮನವನ್ನು ಹರಿಸುವುದು.)
7. ಅರ್ಜಿಗಳನ್ನು ಕಡ್ಡಾಯವಾಗಿ ನಿಗದಿತ ದಿನಾಂಕದೊಳಗೆ (**<u>19-03-2021 ರೊಳಗಾಗಿ)</u>** ಸಲ್ಲಿಸಬೇಕು.
8. ವಿದ್ಯಾರ್ಥಿಗಳ ಖಾತೆಗೆ ಧನಸಹಾಯದ ಮೊತ್ತವನ್ನು ಸಂದಾಯ ಮಾಡುವುದರಿಂದ ಸದರಿ ವಿದ್ಯಾರ್ಥಿಯು ಖಾತೆಯನ್ನು ಹೊಂದಿರುವ ಬ್ಯಾಂಕಿನ ಹೆಸರು, ಉಳಿತಾಯ ಖಾತೆ ಸಂಖ್ಯೆ ಹಾಗೂ ಐಈಖಿ ಅಡಜ ಸ್ಪಷ್ಟವಾಗಿ ಕಾಣುವಂತಹ ಖಾತಾ ಪುಸ್ತಕದ ಜೆರಾಕ್ಸ್ ಲಗತ್ತಿಸಬೇಕು
9. ಸೂಚಿಸಿದ ದಿನಾಂಕದಂದು ಹಾಗೂ ನಿಗದಿತ ವೇಳೆಯಲ್ಲಿ ವೈದ್ಯಕೀಯ ತಪಾಸಣೆಗೆ ಹಾಜರಾಗಬೇಕು ಹಾಜರಾಗದಿದ್ದ ಪಕ್ಷದಲ್ಲಿ ಅರ್ಜಿಯನ್ನು ತಿರಸ್ಕರಿಸಲಾಗುವುದು.

# ಪ್ರಮಾಣ ಪತ್ರ

1. ಈ ಮೇಲ್ಕಂಡಂತೆ ನಮೂದಿಸಿರುವ ವಿಷಯವೆಲ್ಲವೂ ಸತ್ಯವಾದವು.
2. ವಿಶ್ವವಿದ್ಯಾನಿಲಯ ಧನಸಹಾಯ ನೀಡಿದಲ್ಲಿ ಸದುಪಯೋಗಪಡಿಸಿಕೊಳ್ಳುತ್ತೇನೆ.
3. ವಿವರ ಸತ್ಯಕ್ಕೆ ದೂರವಾದುದೆಂದು ತಿಳಿದು ಬಂದಲ್ಲಿ, ಧನಸಹಾಯವನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.
4. ವಿಶೇಷಚೇತನ ಧನಸಹಾಯ ಆಯ್ಕೆ ಸಮಿತಿಯು ಖುದ್ದು ಹಾಜರಾತಿ ನಿರೀಕ್ಷಿಸಿದ್ದಲ್ಲಿ, ನನ್ನ ಸ್ವಂತ ಖರ್ಚಿನಲ್ಲಿ ಸೂಚಿಸಿದ ಸ್ಥಳದಲ್ಲಿ ಸಮಿತಿಯ ಮುಂದೆ ಹಾಜರಾಗುತ್ತೇನೆ.

**ತಂದೆ/ತಾಯಿ/ಪೋಷಕರ ಸಹಿ**

**ಸ್ಥಳ :**
**ದಿನಾಂಕ:**

**ವಿದ್ಯಾರ್ಥಿಯ ಸಹಿ**
**ಹೆಸರು:**

## ಸಂಬಂಧಪಟ್ಟ ಕಾಲೇಜಿನಿಂದ/ ವಿಭಾಗದಿಂದ ಪ್ರಮಾಣ ಪತ್ರ

ಶ್ರೀ/ಕು ________________________ ವಿದ್ಯಾರ್ಥಿ/ವಿದ್ಯಾರ್ಥಿನಿಯು ನಮ್ಮ ವಿಭಾಗ/ ಕಾಲೇಜಿನಲ್ಲಿ ________________________ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ.

ಅವರಿಗೆ ________________ ಭಾಗದಲ್ಲಿ ಅಂಗವಿಕಲತೆ ಇದೆ. ಈ ವಿದ್ಯಾರ್ಥಿ/ವಿದ್ಯಾರ್ಥಿನಿಯು ಶೇಕಡ 75%ಕ್ಕು ಹೆಚ್ಚಿನ ಹಾಜರಾತಿಯನ್ನು ಹೊಂದಿರುತ್ತಾರೆ ಹಾಗೂ ಅವರ ಅರ್ಜಿಯಲ್ಲಿ ಹೇಳಿರುವುದು ಎಲ್ಲಾ ಸತ್ಯವಾಗಿರುವುದರಿಂದ ವಿಶ್ವವಿದ್ಯಾನಿಲಯದ ಧನಸಹಾಯಕ್ಕೆ ಅರ್ಜಿ ಸಲ್ಲಿಸಲು ಇವರು ಅರ್ಹರಾಗಿದ್ದಾರೆ ಎಂದು ದೃಢೀಕರಿಸುತ್ತೇನೆ.

**ಸ್ಥಳ:**
**ದಿನಾಂಕ:**

**ಪ್ರಾಂಶುಪಾಲರು/ ವಿಭಾಗದ ಮುಖ್ಯಸ್ಥರು**
**(ಸಹಿ ಮತ್ತು ಮೊಹರಿನೊಂದಿಗೆ)**

**ಕಾಲೇಜಿನ ದೂರವಾಣಿ ಸಂಖ್ಯೆ :**

## ಹಣ ಸಂದಾಯ ರಶೀದಿ :

ನಿರ್ದೇಶಕರು, ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯ, ಇವರಿಂದ 2020-21ನೇ ಸಾಲಿನ ವಿಶೇಷಚೇತನ ವಿದ್ಯಾರ್ಥಿಗಳ ಧನಸಹಾಯದ ಮೊತ್ತ ರೂ :________________________ (ರೂಪಾಯಿ____________________________ ಗಳು ಮಾತ್ರ) ಗಳನ್ನು ಪಡೆದಿರುತ್ತೇನೆ.

ವಿದ್ಯಾರ್ಥಿಯ ಹೆಸರು :

ತರಗತಿ :

ದಿನಾಂಕ : ವಿದ್ಯಾರ್ಥಿಯ ಸಹಿ

<u>ವಿದ್ಯಾರ್ಥಿಯ ಸಹಿಯನ್ನು ದೃಢೀಕರಿಸುತ್ತೇನೆ.</u>

ಪ್ರಾಂಶುಪಾಲರು/ ವಿಭಾಗದ ಮುಖ್ಯಸ್ಥರು
(ಸಹಿ ಮತ್ತು ಮೊಹರಿನೊಂದಿಗೆ)

---

(ವಿದ್ಯಾರ್ಥಿ ಕ್ಷೇಮಪಾಲನಾ ನಿರ್ದೇಶನಾಲಯದ ಉಪಯೋಗಕ್ಕಾಗಿ)

<u>ದೃಢೀಕರಣ:</u>

1. ಈ ಹುಂಡಿಯಲ್ಲಿನ ಮೊಬಲಗು ರೂ: ______ (ರೂಪಾಯಿ ________________________________________ ಗಳು ಮಾತ್ರ) ಅನ್ನು ಪಾವತಿಗಾಗಿ ಅಂಗೀಕರಿಸಿದೆ.
2. ಈ ಹುಂಡಿಯಲ್ಲಿನ ಮೊಬಲಗನ್ನು ಈ ಹಿಂದಿನ ಯಾವುದೇ ಹುಂಡಿಯಲ್ಲಿ ಪಾವತಿಗಾಗಿ ಕೋರಿರುವುದಿಲ್ಲ ಎಂದು ದೃಢೀಕರಿಸಿದೆ.
3. ಈ ಹುಂಡಿಯಲ್ಲಿನ ಮೊಬಲಗನ್ನು 2020-21ನೇ ಸಾಲಿನಲ್ಲಿ ವಿಶೇಷಚೇತನ ವಿದ್ಯಾರ್ಥಿಗಳ ಧನಸಹಾಯ ಮೊತ್ತದಿಂದ ಪಾವತಿ ಮಾಡಿದೆ ಎಂದು ದೃಢೀಕರಿಸಿದೆ.

ನಿರ್ದೇಶಕ